ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು)

ಅ) ಸದರಿ ವಿಷಯದ ಮೇಲೆ ಸರ್ವೋಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಎಸ್.ಎಲ್.ಪಿ. (ಸಿಎಲ್) ನಂ.9643/2003 ದಾಖಲಿಸಲಾಗಿರುತ್ತದೆ. ಈ ವಿಷಯವು ಸರ್ವೋಚ್ಚ ನ್ಯಾಯಾಲಯದ ಮುಂದೆ ಇರುವುದರಿಂದ ಈ ಬಗ್ಗೆ ಸರ್ವೋಚ್ಚ ನ್ಯಾಯಾಲಯವು ನೀಡುವ ಆದೇಶವನ್ನು ಪಾಲಿಸಬೇಕಾಗಿರುತ್ತದೆ.

ಆ) ಹೌದು.

ಇ) ವಿಷಯವು ಸರ್ವೋಚ್ಚ ನ್ಯಾಯಾಲಯದ ಮುಂದೆ ಇರುವುದರಿಂದ, ಈ ಬಗ್ಗೆ ಸರ್ವೋಚ್ಚ ನ್ಯಾಯಾಲಯವು ನೀಡುವ ಆದೇಸವನ್ನು ಪಾಲಿಸಬೇಕಾಗಿರುತ್ತದೆ.

ಈ) ಉದ್ಭವಿಸುವುದಿಲ್ಲ.

ಅಗರಬತ್ತಿ ವರ್ಕ್ಸ್ ಅಂಡ್ ಅದರ್ಸ್ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ

4690 (5192) : ಶ್ರೀ ಸದಾನಂದ ಗೌಡ ಡಿ.ವಿ. (ಪುತ್ತೂರು) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅಗರಬತ್ತಿ ವರ್ಕ್ಸ್ ಅಂಡ್ ಗೃಹನಿರ್ಮಾಣ ಸಹಕಾರ ಸಂಘ ನಿಯಮಿತ ಸಂಘದ ಸ್ಥಿರಾಸ್ತಿ ಎಷ್ಟು ವಿವರ ನೀಡುವುದು, ಎಷ್ಟು ಜನ ನೈಜ ಸದಸ್ಯರಿದ್ದಾರೆ: ಈ ಬಗ್ಗೆ ವಿಚಾರಣೆ ಏನಾದರೂ ಮಾಡಲಾಗಿದೆಯೇ?

ಆ) ಈ ಸಂಘದ ಅಧ್ಯಕ್ಷರು ಸಂಘದ ಹೆಸರಿನಲ್ಲಿ ಜಮೀನನ್ನು ಕರಾರು ಮಾಡಿ ನಂತರ ನೈಯಕ್ತಿಕವಾಗಿ ಬಡಾವಣೆ ನಿರ್ಮಾಣ ಮಾಡಿ ಲಾಭ ಗಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ?

ಇ) 15 ವರ್ಷಗಳಿಗೆ ಮೇಲ್ಪಟ್ಟು ಸಂಘದಿಂದ ಸದಸ್ಯರ ಉದ್ದೇಶ ಸಾಧನೆ ಆಗದಿರುವುದನ್ನು ಗಮನಿಸಿ ಸಂಘವನ್ನು ಸಮಾಪನೆಗೊಳಿಸಲು ಆದೇಶ ಮಾಡಿದ್ದು ನಂತರ ಹಿಂದೆ ಪಡೆಯಲು ಕಾರಣವೇನು?

ಈ) ಈ ಸಂಘವನ್ನು ಸಮಾಪನಗೊಳಿಸಲು ಕ್ರಮ ಕೈಗೊಳ್ಳಲಾಗುವುದೆ?

ಶ್ರೀ ಹೆಚ್. ವಿಶ್ವನಾಥ್ (ಸಹಕರ ಸಚಿವರು)

ಅ) ಅಗರ್ ಬತ್ತಿ ವರ್ಕ್ಸ್ ಅಂಡ್ ಅದರ್ಸ್ ಗೃಹ ನಿರ್ಮಾಣ ಸಹಕಾರ ಸಂಘ ನಿ. ದಲ್ಲಿ ಬೆಂಗಳೂರು ಉತ್ತರ ತಾಲ್ಲೂಕು ಚಿಕ್ಕಬೆಟ್ಟಹಳ್ಳಿ ಗ್ರಾಮದಲ್ಲಿ 4.16 1/2 ಎಕರೆ ಜಮೀನು ಇರುತ್ತದೆ. ಸಂಘದಲ್ಲಿ 84 ಜನ ಸದಸ್ಯರಿದ್ದು ವಿಚಾರಣೆಯಲ್ಲಿ ನೈಜತೆ ಬಗ್ಗೆ ನೋಟೀಸ್ ನೀಡಿದ್ದು 60 ಜನರಿಗೆ ನೋಟೀಸು ಜಾರಿಯಾಗದೆ ವಾಪಸ್ಸು ಬಂದಿದ್ದು ಉಳಿದ ಸದಸ್ಯರು ತಮ್ಮ ನೈಜ ಸದಸ್ಯತ್ವವನ್ನು ಸಾಬೀತು ಪಡಿಸಲು ಸಮರ್ಥಿಸುವ ಪೂರಕ ದಾಖಲೆಗಳನ್ನು ಒದಗಿಸಿಲ್ಲ.

ಆ) ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959ರ ಕಲಂ 65 ರನ್ವಯ ಪರಿವೀಕ್ಷಣಾ ವರದಿಯಂತೆ ಸಂಘದ ಅಧ್ಯಕ್ಷರು ಸಂಘದ ಹೆಸರಿನಲ್ಲಿ ವೈಯಕ್ತಿಕವಾಗಿ ವ್ಯವಹಾರ ನಡೆಸಿ ಬಡಾವಣೆ ನಿರ್ಮಾಣ ಮಾಡಿರುವುದು ಕಂಡು ಬಂದಿದ್ದು, ಸಂಘವು ಬಡಾವಣೆ ನಿರ್ಮಿಸಲಿರುವ ಜಮೀನು ನ್ಯಾಯಾಲಯದಲ್ಲಿ ತಕರಾರಿನಲ್ಲಿರುವ ಕಾರಣ ಅಧ್ಯಕ್ಷರ ವಿರುದ್ಧ ಕ್ರಮ ಜರುಗಿಸಿಲ್ಲ. ಈ ಬಗ್ಗೆ ಪರಿಶೀಲಿಸಿ ಕ್ರಮ ಜರುಗಿಸಲಾಗುವುದು.

ಇ) ಈ ಸಮಾಪನೆ ಆದೇಶದ ವಿರುದ್ಧ ಸಂಘದ ಆಡಳಿತ ಮಂಡಳಿಯವರು ಗೌರವ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ರಿಟ್ ಅರ್ಜಿ ಸಂಖ್ಯೆ:3176:98 ರಲ್ಲಿ ನ್ಯಾಯಾಲಯವು ದಿನಾಂಕ: 9.8.99 ರಂದು ತೀರ್ಪು ನೀಡಿ ಈ ತೀರ್ಪಿನಲ್ಲಿ ಸಂಘವು ನೀಡಿರುವ ಸಾಕ್ಷಿ ಹಾಗೂ ಪುರಾವೆಗಳನ್ನು ಆದೇಶ ಪೂರ್ವದಲ್ಲಿ ಗಣಗಳಿಗೆ ತೆಗೆದುಕೊಳ್ಳದೇ ಸಮಾಪನೆಮಾಡಿಕೊಳ್ಳಲಾಗಿದೆ. ಎಂದು ಅವಲೋಕಿಸಿ, ಸಮಾಪನಾ ಆದೇಶ ಹಾಗೂ ಅಪೀಲು ಅದೇಶಗಳನ್ನು ರದ್ದುಪಡಿಸಿ 3 ತಿಂಗಳೊಳಗಾಗಿ ಅರ್ಜಿದಾರರಿಂದ ಲಿಖಿತ ದಾಖಲೆಗಳನ್ನು ಮತ್ತು ಅಹವಾಲುಗಳನ್ನು ಸ್ವೀಕರಿಸಿ, ಅಗತ್ಯವಿದ್ದಲ್ಲಿ ದಿನನಿತ್ಯ ಮತ್ತು ಔಟ್ ಆಪ್. ಟರ್ನ್ ವಿಚಾರಣೆ ನಡೆಸಿ ಸಂಘವನ್ನು ಮುಕ್ತಾಯಗೊಳಿಸಲು ಆದೇಶಿಸಿದ್ದು, ವಿಚಾರಣೆ ನಡೆಸಿದ ನಂತರ ಈ ಸಂಘದ ಆಡಳಿತ ಮಂಡಳಿಯ ಅಹವಾಲುಗಳನ್ನು ಪರಿಗಣಿಸಿ ಈ ಸಂಘವನ್ನು ಪುನ:ಶ್ಚೇತನಗೊಳಿಸಿ ಆದೇಶಿಸಲಾಗಿರುತ್ತದೆ.

ಈ) ಈಗ ಸಂಘದ ಕಾರ್ಯ ಚಟುವಟಿಕೆಗಳನ್ನು ಪರಿಶೀಲಿಸಿ ಸಂಘವನ್ನು ಸಮಾಪನೆಗೊಳಿಸುವ ಪ್ರಸ್ತಾವ ಪರಿಶೀಲನೆಯಲ್ಲಿದೆ.

ರಾಜ್ಯದಲ್ಲಿ ಸಾಲದಿಂದಾಗಿ ರೈತರ ಆತ್ಮಹತ್ಯೆ ಪ್ರಕರಣಗಳು

4692 (5392) : ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ ವರ್ಷಗಳಿಂದೀಚೆಗೆ ಸಾಲದಿಂದಾಗಿ ಆತ್ಮಹತ್ಯೆ ಮಾಡಿಕೊಂಡ ರೈತರ ಸಂಖ್ಯೆ ಎಷ್ಟು; ವಿವರವನ್ನು ಒದಗಿಸುವುದು.

ಆ) ಸದರಿ ಪ್ರಕರಣಗಳು ಎಲ್ಲೆಲ್ಲಿ ಯಾವಾಗ ಘಟಿಸಿದವು (ವಿವರ ನೀಡುವುದು)

ಇ) ಸದರಿ ಕುಟುಂಬಗಳಿಗೆ ಸರ್ಕಾರದಿಂದ ಯಾವ ರೀತಿಯ ಅನುಕೂಲ ಕಲ್ಪಿಸಿಕೊಡಲಾಯಿತು? (ವಿವರ ನೀಡುವುದು)

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು)

ಅ) ಕಳೆದ ವರ್ಷದಿಂದೀಚೆಗೆ ಅಂದರೆ ಜುಲೈ 2003 ಅಂತ್ಯದವರೆಗೆ ಸಾಲದ ಹೊರೆ: ಬೆಳೆ ವೈಫಲ್ಯ ಹಾಗೂ ಇತರೆ ಕಾರಣಗಳಿಂದ ಆತ್ಮಹತ್ಯೆ ಮಾಡಿಕೊಂಡ ರೈತರ ಸಂಖ್ಯೆಯು 102 ಆಗಿರುತ್ತದೆ. (ಜಿಲ್ಲಾವಾರು ವಿವರಗಳನ್ನು ಲಗತ್ತಿಸಿರುವ ಅನುಬಂಧದಲ್ಲಿ ನೀಡಲಾಗಿದೆ.)

ಆ) ಸದರಿ ಪ್ರಕರಣಗಳು ಎಲ್ಲೆಲ್ಲಿ ಯಾವಾಗ ಘಟಿಸಿದ ಬಗ್ಗೆ ವಿವರಗಳನ್ನು ಲಗತ್ತಿಸಿರುವ ಅನುಬಂಧದಲ್ಲಿ ನೀಡಲಾಗಿದೆ.

ಇ) ಕಳೆದ ವರ್ಷದಿಂದೀಚೆಗೆ (2003 ಜುಲೈ ಅಂತ್ಯದವರೆಗೆ) ಆತ್ಮಹತ್ಯೆ ಮಾಡಿಕೊಂಡ ಕೆಲವು ರೈತರ ಕುಟುಂಬಗಳಿಗೆ ಮುಖ್ಯಮಂತ್ರಿಗಳ ಪರಿಹಾರ ನಿಧಿ, ಜಿಲ್ಲಾಧಿಕಾರಿಗಳ ಪರಿಹಾರ ನಿಧಿ, ಸಾರ್ವಜನಿಕ ವಂತಿಕೆ, ರಾಷ್ಟ್ರೀಯ ಸಾಮಾಜಿಕ ಭದ್ರತಾ ಯೋಜನೆ, ರಾಷ್ಟ್ರೀಯ ಸಾಮಾಜಿಕ ನೆರವು ಯೋಜನೆ, ಇತ್ಯಾದಿಗಳ ಮೂಲಕ, ಒಟ್ಟು ರೂ. 2.67 ಲಕ್ಷಗಳ ಪರಿಹಾರವನ್ನು ನೀಡಲಾಗಿದೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.